ಕರ್ನಾಟಕ ವಿಧಾನ ಸಭೆ

591

ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)

ಅ) ಪಶ್ಚಿಮ ಘಟ್ಟವಾದ ಸಕಲೇಶಪುರ ತಾಲ್ಲೂಕಿನಲ್ಲಿ ಇಲಾಖೆಯವರು ಯಾವ ಯಾವ ಸರ್ಕಾರಿ ಮತ್ತು ಖಾಸಗಿ ಜಲ ವಿದ್ಯುತ್ ಯೋಜನೆಗಳಿಗೆ ಒಪ್ಪಿಗೆ ನೀಡಿದ್ದಾರೆ;

ಆ) ಈ ಯೋಜನೆಗಳ ಜಾರಿಯಿಂದ ಅರಣ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತು ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಗುಂಡ್ಯ ಜಲ ವಿದ್ಯುತ್ ಯೋಜನೆಗೆ ಸರ್ಕಾರ ಗುದ್ದಲಿ ಪೂಜೆ ನೆರವೇರಿಸಿದ್ದು, ಎಲ್ಲಿಯವರೆವಿಗೆ ಪ್ರಗತಿ ಸಾಧಿಸಲಾಗಲಿದೆ ?

ಇಂಧನ ಸಚಿವರು

ಅ) ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಗುಂಡ್ಯ ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ. ಖಾಸಗಿ ಅಭಿವೃದ್ಧಿದಾರರಿಗೆ ಕಿರು ಜಲ ವಿದ್ಯುತ್ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪ್ರಸ್ತಾವಿನ ಗುಂಡ್ಯ ಜಲ ವಿದ್ಯುತ್ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಇನ್ನೂ ಅನುಷ್ಠಾನಗೊಳಿಸಬೇಕಾಗಿದೆ. ಕಿರು ಜಲ ವಿದ್ಯುತ್ ಯೋಜನೆಗಳನ್ನು ಖಾಸಗಿ ಅಭಿವೃದ್ಧಿದಾರರಿಗೆ ಹಂಚಿಕೆ ಮಾಡಿದ ನಂತರ ಅಭಿವೃದ್ಧಿದಾರರು ಯೋಜನೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯಿಂದ ಹಾಗೂ ಇತರ ಸಂಬಂಧಪಟ್ಟ ಇಲಾಖೆಗಳಿಂದ ಅನುಮೋದನೆಯನ್ನು ಪಡೆದ ನಂತರವೇ ಕಾಮಗಾರಿ ಪ್ರಾರಂಭಿಸಬೇಕಾಗುತ್ತದೆ.

ಇ) ಗುಂಡ್ಯ ಜಲ ವಿದ್ಯುತ್ ಯೋಜನೆ ಅನುಷ್ಠಾನಗೊಳಿಸಲು ಅವಶ್ಯವಿರುವ ಪರಿಸರ ನಿಟ್ಟಿನ ಅನುಮತಿಯನ್ನು ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ನಿರೀಕ್ಷಿಸಲಾಗುತ್ತಿದೆ. ಯೋಜನೆಯ ಅನುಷ್ಠಾನಕ್ಕೆ ಅವಶ್ಯವಿರುವ ಅರಣ್ಯ ಭೂಮಿ ವರ್ಗಾವಣೆಯ ಪ್ರಸ್ತಾವನೆಯನ್ನು ಕೇಂದ್ರ ಪರಿಸರ ಹಾಗೂ ಅರಣ್ಯ ಮಂತ್ರಾಲಯಕ್ಕೆ ಸಲ್ಲಿಸಬೇಕಾಗಿದೆ. ಯೋಜನೆಗೆ ಅವಶ್ಯವಿರುವ ಇನ್ನಿತರ ಇಲಾಖೆಗಳ ಅನುಮತಿಗಳು ದೊರಕಿರುತ್ತವೆ.

ಸಂಖ್ಯೆ : ಇಎನ್ 125 ಪಿಪಿಎಂ 2012

(ಶೋಭಾ ಕರಂದ್ಲಾಜೆ)
ಇಂಧನ ಸಚಿವರು

List Allotted Small Hydro Projects in Sakaleshapura Taluk, Hassan District

Sl No.	Company	MHS	Location	Taluk	District	Capacity MW	Status
1	International Power Corporation Ltd.	Kemphole	Kemphole MHS across Kemphole at Maranahalli Village of Sakaleshpur Taluk in Hassan	Sakaleshapura	Hassan	18.00	Commissioned
2	Paschim Hydro Energy Pvt. Ltd.	Kadamane I	Kadamane I MHS at Manchahalli village Marenahalli, Sakaleshpur Taluk in Hassan District	Sakaleshapura	Hassan	9.00	Commissioned
3	Nagarjuna Hydro Energy Pvt. Ltd	Kadamane II	Kadamane MHS Kadamane, Kadamane II. Marenahalli, Sakaleshpur Taluk in Hassan District	Sakaleshapura	Hassan	15.00	Commissioned
4	Trimurthi Power Pvt. Ltd.	Addahole	Addahole MH Kadamane, KAdamane II. Marenahalli, Sakaleshpur Talu in Hassan District	Sakaleshapura	Hassan	24.00	Allotted
5	South West Hydro Power Pvt. Ltd.	Abilbiru	Abilbiru MHS across Abkilbiru Stream At Marenahalli Village of Sakaleshpura Taluk in Hassan District	Sakaleshapura	Hassan	6.00	Allotted
6	Malleshwara Power Gen Pvt. Ltd.	Keri Hole	Across Keri Hole near Village of Sakaleshpura Taluk	Sakaleshapura	Hassan	1.50	Allotted

Sl No.	Company	MHS	Location	Taluk	District	Capacity MW	Status
7	Deepak Cables (1) Pvt. Ltd.	Maranahalli	Maranahalli Hole near Keri Village Sakaleshpura Taluk	Sakaleshapura	Hassan	14.10	Allotted
8	Mysore Mercantile co Ltd.	Doddatappale	Doddatappale MHS across Yattinahole river Doddatappale village of Sakaleshpura Taluk in Hassan District	Sakaleshapura	Hassan	3.00	Commissioned
9	Trimurthi Power Pvt. Ltd.	Kurkamane	Kurkamane MHS across Addahole near Bisle Village, (Kurkumane) of Sakaleshpur Taluk in Hassan	Sakaleshapura	Hassan	24.00	Allotted
10	Prolight Systems	Kulkanahalli	Kukanahalli river at Magjihally Village, in Sakaleshpura Taluk, of Hassan District	Sakaleshapura	Hassan	1.00	Allotted
11	Maruthi Power Gen (India) Pvt. Ltd.	Hongadalla	Hongadalla MHS aross Hongadahalla stream a tributary to Kemphole near Yedakumari Village	Sakaleshapura	Hassan	24.00	Allotted
12	Maruthi Power Gen (India) Pvt. Ltd.	Bettakumari	Bettakumari MHS across Bettakumari stream a tributary to Kumaradhara near	Sakaleshapura	Hassan	13.00	Allotted
13	Maruthi Power Gen (India) Pvt. Ltd.	Yedakumari	Yedakumari MHS across Hongadahalla river near Yedakumari Village of Sakaleshpura	Sakaleshapura	Hassan	24.00	Allotted

Sl No.	Company	MHS	Location	Taluk	District	Capacity MW	Status
14	Hotel Maruthi Pvt. Ltd.	Yettinahole	Yettinahole MHS across Yettinahole stream at alavalli village of Sakleshpura taluk in	Sakaleshapura	Hassan	4.00	Allotted
15	Om Shakthi Power Producers	Bettakumari	Battakumari MHS across Bettakumari river at Bhiman kal village of Sakaleshpura Taluk in	Sakaleshapura	Hassan	5.00	Allotted
16	Acacia Energy Ventures Pvt. Ltd.	Devaralla	Devaralla MHS across Devarahall Stream at maragunda village of Sakaleshpur Taluk in Hassan District	Sakaleshapura	Hassan	4.00	Allotted
17	MVK Infrastructure Pvt. Ltd.	Balekallu	Balekallu MHS across Balekalluhole a tributary to Yettinahole at marenahalli village of Sakaleshpura Taluk in Hassan District	Sakaleshapura	Hassan	4.00	Allotted
18	Moodabagil Power Pvt. Ltd	Mokkanamane	Mokkanamane MHS across Hongadalla Stream at Mokkanamane Village of Sakaleshpura Taluk in Hassan District.	Sakaleshapura	Hassan	2.00	Allotted

	Number of Project	Capacity in MW
Commissioned Project	4	45.00
Allotted Project	14	150.60

ಕರ್ನಾಟಕ ವಿಧಾನ ಸಭೆ

595

ಶ್ರೀ ದಿನೇಶ್ ಗುಂಡೂರಾವ್

ಅ) ಇತ್ತೀಚೆಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಸಚಿವಾಲಯದಲ್ಲಿ ಆಕಸ್ಮಿಕ ತನಿಖೆ ಮಾಡಿದಾಗ 400 ಕಡತಗಳು ಕಣ್ಮರೆಯಾಗಿರುವುದಾಗಿ ವರದಿ ಆಗಿರುತ್ತದೆ; ಈ 400 ಕಡತಗಳು ಯಾವುದು; (ಸಂಪೂರ್ಣ ವಿವರಗಳನ್ನು ನೀಡುವುದು);

ಆ) ಈ ಕಡತಗಳು ಕಣ್ಮರೆಯಾಗಿರುವುದಕ್ಕೆ ಕಾರಣ ಯಾರು ಅವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ?

ವೈದ್ಯಕೀಯ ಶಿಕ್ಷಣ ಸಚಿವರು

ಅ) ಸಚಿವಾಲಯದ ವೈದ್ಯಕೀಯ ಶಿಕ್ಷಣ ಶಾಖೆಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಿದ ವೇಳೆಯಲ್ಲಿ ಶಾಖೆಯಲ್ಲಿ ಭೌತಿಕವಾಗಿದ್ದ ಕಡತಗಳ ಹಾಗೂ ಗಣಕೀಕರಣಗೊಳಿಸಿದ್ದ ಕಡತಗಳ ಸಂಖ್ಯೆಯಲ್ಲಿ ಹೆಚ್ಚಿನ ವ್ಯತ್ಯಾಸವಿದ್ದುದು ತಪಾಸಣಾ ಸಮಯದಲ್ಲಿ ನೀಡಲಾದ ಗಣಕೀಕೃತ ಮಾಹಿತಿಯಿಂದ ಕಂಡುಬಂದಿತ್ತು.

ತದನಂತರ ಪರಿಶೀಲಿಸಲಾಗಿ ಸಚಿವಾಲಯದ ಹಂತದಲ್ಲಿ ವೈದ್ಯಕೀಯ ಶಿಕ್ಷಣ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ಒಂದೇ ಶಾಖೆಯಲ್ಲಿ ಕಡತಗಳನ್ನು ಭೌತಿಕವಾಗಿ ನಿರ್ವಹಿಸಲಾಗುತ್ತಿದ್ದು, ಕಡತಗಳ ಚಲನವಲನವನ್ನು ಗಣಕೀಕರಣಗೊಳಿಸಿದ ಸಮಯದಲ್ಲಿ ಶಾಖೆಯಲ್ಲಿದ್ದ ಎಲ್ಲಾ ಕಡತಗಳನ್ನು ಗಣಕಯಂತ್ರಕ್ಕೆ ಅಳವಡಿಸಿರುವುದು ಕಂಡಬಂದಿದೆ. ಕಾಲಕ್ರಮೇಣ ಕಡತಗಳಲ್ಲಿನ ಕ್ರಮವು ಮುಕ್ತಾಯಗೊಳಿಸಿದ್ದು, ಶಾಖೆಯಲ್ಲಿನ ಸಿಬ್ಬಂದಿಯ ಕೊರತೆ ಹಾಗೂ ಹೆಚ್ಚಿನ ಕೆಲಸದ ಒತ್ತಡದಿಂದಾಗಿ ಮುಕ್ತಾಯಗೊಂಡ ಕಡತಗಳನ್ನು